Regd No BG 155

— ಶ್ರೀ —

10—1—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಆಂಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಮಂಗಳೂರಿನಲ್ಲಿ ಕತಕ ಗೊಬರದ ಕಾರ್ಖಾನೆ

ಮಾಲಿ ಮರಿಯಪ್ಪನವರು

ರಾಜ್ಯದ ಸಹಕಾರ ಮಂತ್ರಿ ಶ್ರೀ ಮಾಲಿ ಮರಿಯಪ್ಪನವರು ಈ ಮಾಹೆ 11 ರಿಂದ 13 ರ ವರಿಗೆ ಮೈ ಸೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಸಂಚರಿಸು ವರು.

ಮೇಯರ್ ಸಮ್ಮೇಳನ

ನವ ದೆಹಲಿಯಲ್ಲಿ ಸೇರಿದ್ದ ಅಖಿಲ ಭಾರತ ಮೇಯರುಗಳ ಸಮ್ಮೇಳನ ಕಾ ರ್ಪೊರೇಷನ್ ಅವಧಿಯನ್ನು 4 ವರ್ಷಗ ಳಿಂದ 5 ವರ್ಷಗಳಿಗೆ ಹೆಚ್ಚಿಸುವಂತೆ ಭಾರತ ಸರ್ಕಾರವನ್ನು ಕೋರಿದೆ. ಕಾರ್ಪೊ ರೇಷನ್‌ಗಳಿಗೆ ಹೆಚ್ಚಿನ ಅಧಿಕಾರ ಸಹ ಬೇಕೆಂದು ಸಮ್ಮೇಳನ ಮನವಿಮಾಡಿದೆ. ಮೇಯರ್ ಸಮ್ಮೇಳನ ನಿನ್ನೆ ಮುಕ್ತಾಯ ವಾಯಿತು.

ಚುನಾವಣೆ ನಡೆಯಲಿ

ಕೇಂದ್ರ ಸರ್ಕಾರ ಪ್ರಾತಿನಿಧಿಕ ಸರ ಕಾರ ಅಲ್ಲ. ಆದ್ದರಿಂದ ಹೊಸದಾಗಿ ಚು ನಾವಣೆಗಳು ನಡೆಯಬೇಕು ಎಂದು ಕಾಂಗ್ರೆಸೇತರ ಪ್ರಜಾಸಮಾಜವಾದಿ ಪಕ್ಷ ಕೇಂ ದ್ರ ಸರ್ಕಾರಕ್ಕೆ ಮನವಿ ಅರ್ಪಿಸಿದೆ.

ಶೃಂಗೇರಿ ಜಗದ್ಗುರುಗಳು

ಅಷ್ಟಗ್ರಹ ದೋಷ ನಿವಾರಣೆಗಾಗಿ ಚಾಮರಾಜನಗರದಲ್ಲಿ ನಡೆಯುವ ಮಹಾಯಾಗದಲ್ಲಿ ಭಾಗವಹಿಸಲು ಶ್ರೀ ಶೃಂಗೇರಿ ಜಗದ್ಗುರುಗಳವರು ಆಗಮಿಸು ವರು. ಶಾ|| 14 ರಂದು

ಐದು ವಲಯಗಳು

ಕೇಂದ್ರ ಗವರ್ನರ್‌ರಾದ ಶ್ರೀ ವಿ ವಿ ಗಿರಿಯವರು ಮೊನ್ನೆ ತಿರುವೇಂದ್ರಂ ಲಯನ್ಸ್ ಕ್ಲಬ್ಬಿನಲ್ಲಿ ಮಾತನಾಡುತ್ತಾ ಭಾರತದಲ್ಲಿ 5 ವಲಯ ಸರ್ಕಾರಗಳು ಸಂ ಸ್ಥಾಪಿತವಾಗುವದೆಂದು ಭವಿಷ್ಯ ನುಡಿ ದರು.

ಕಾಂಗ್ರೆಸಿನ ಬಗ್ಗೆ ಟೀಕೆ

ಕಾಂಗ್ರೆಸಿಗರ 14 ವರ್ಷಗಳ ಆಡಳಿತ ಹಿಂದೂಗಳು ಹಾಗೂ ಹಿಂದೂ ಜನತಾಂ ಗಕ್ಕೆ ಹಾನಿಮಾಡಿದೆ ಎಂದು ಅಖಿಲ ಭಾರತ ಹಿಂದೂ ಮಹಾಸಭೆಯ ಉಪಾ ಧ್ಯಕ್ಷ ಶ್ರೀ ನಿತ್ಯನಾರಾಯಣ ಬ್ಯಾನರ್ಜಿ ನಿನ್ನೆ ಶಿವಮೊಗ್ಗಾದಲ್ಲಿ ನುಡಿದರು.

ತೋಟದ ನಿರ್ಮಾಣ

ಹಾಸನ ಜಿಲ್ಲೆಯ ಸೋಮನಹಳ್ಳಿ ಕಾವಲಿನ ಮುನ್ನೂರು ಎಕರೆ ಪ್ರದೇಶ ದಲ್ಲಿ ತೋಟ ಸ್ಥಾಪನೆ ಆಗುವದು.

ಗೋರಕ್ಷಣೆ ಮಾಡಿ

ಕಾಂಗ್ರೆಸು ಪಕ್ಷ ಬಹುಮತವಿರುವ ಶಿವಮೊಗ್ಗಾ ಪೌರಸಭೆ ಅಖಿಲ ಭಾರತ ಹಿಂದೂ ಮಹಾಸಭೆಯ ಉಪಾಧ್ಯಕ್ಷ ಶ್ರೀ ನಿತ್ಯನಾರಾಯಣ ಬ್ಯಾನರ್ಜಿಯು ವೆಂ ಗೌರವಾರ್ಥ ಪೌರಸ್ವಾಗತವೇರ್ಪ ಡಿಸಿದ್ದಿತು. ಪಟ್ಟಣದ ಅಭಿವೃದ್ಧಿ ಹಾಗೂ ಗೋರಕ್ಷಣೆಗೆ ಕೆಲಸ ಮಾಡಬೇ ಕೆಂದು ಅವರು ನುಡಿದರು.

ಬಡವರ ಗೆಳೆಯ ಅಲ್ಲ

ಕಾಂಗ್ರೆಸು ಬಡವರ ಗೆಳೆಯನಲ್ಲವೆಂ ಬುದಾಗಿ ಪ್ರಜಾಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾದ ಶ್ರೀ ಅಶೋಕಮೆಹತರು ಹೊಸಪೇಯಾಪುರದಲ್ಲಿ ನಿನ್ನೆ ನುಡಿದರು.

ಮೊರ್ಜ ಸರ್ಕಾರದಲ್ಲಿ ಇರುವುದು ಒಳ್ಳೆಯದಲ್ಲ

ಸಾರ್ವತ್ರಿಕ ಚುನಾವಣೆಯಲ್ಲಿ ಸ್ವ ಧಿಷಲು ಶ್ರೀ ವಿ ಕೆ ಕೃಷ್ಣಮೆನರ್‌ಗೆ ಪಕ್ಷದ ಟಿಕೆಟ್ ಕೊಟ್ಟಿರುವದನ್ನು ಪ್ರತಿ ಭಟಿಸಿ ಶ್ರೀ ರಾಮಕೃಷ್ಣ ಬಜಾಜರು ಕಾಂಗ್ರೆಸಿಗೆ ಹಾಗೂ ಕಾಂಗ್ರೆಸಿನ ಯು ವಕ ಸಂಸ್ಥೆಗೆ ಇತರ ಅಧಿಕಾರ ಮುಕ್ಕೆ ರಾಜೀನಾಮೆ ಕಳಿಸಿರುವರೆಂದು ಬೊಂ ಬಾಯಿ ವಾರ್ತೆ. ಕೃಷ್ಣಮೆನನರು ಕ ಮ್ಯೂನಿಸ್ಟ್ ಪರ ಇರುವರೆಂದು ನನಗೆ ಮನ ದಟ್ಟಾಗಿದೆ. ಅವರು ಸರ್ಕಾರದಲ್ಲಿ ರುವದು ದೇಶದ ಹಿತದೃಷ್ಟಿಯಿಂದ ಒಳ್ಳೆ ಯದಲ್ಲ ಎಂದ ಅವರು ತಿಳಿಸಿರುವರು

ಪ್ರಜ್ಞಾಹೀನಳಾಗಿ ಮರಣ

ಆಕ್ಸ್‌ಫರ್ಡ್‌ಷೈರಿನ 23 ವಯಸ್ಸಿನ ವಿ ರೊನಿಕ ಮೈಸ್ ಮೊನ್ನೆ ವಾಂಡಣಹೊಂದಿ ದಳು ಕಾರು ಅವಘಡದಲ್ಲಿ ಕಳೆದ 3 ವರೆ ವರ್ಷಗಳ ಹಿಂದೆ ಅವಳಿಗೆ ಪ್ರಜ್ಞೆ ಹೋಗಿ ಅವಳಿಗೆ ಪ್ರಜ್ಞೆ ಬರಲಿಲ್ಲ.

ಸಿಡ್ನಬು ನಿರೋಧ

ರಾಜ್ಯದಲ್ಲಿ ಹತ್ತು ವರ್ಷಗಳಿಗೆ ಒಮ್ಮೆ ಸಿಡಿಬು ಹರಡುವುದೆಂದು ಹೇಳ ಲಾಗಿದೆ ಅದರ ನಿರೋಧಕ ಮ ಕೆ ಗೊಳ್ಳಲಾಗುವದು ಎಂದು ರಾಷ್ಟ್ರೀಯ ಮಲೇರಿಯಾ ನಿರೋಧ ಯೋಜನೆಯ ಡಾ|| ಟಿ. ಮುನಿಕೆಂಪಯ್ಯನವರು ಚಾ ಮರಾಜನಗರದಲ್ಲಿ ನಿನ್ನೆ ತಿಳಿಸಿದರು

೦೦

ಕಾಂಗ್ರೆಸ್ ಪಕ್ಷದಲ್ಲಿ ದಂಗೆ ಎದ್ದಿ ರುವ ಮಧ್ಯ ಪ್ರದೇಶದ 40 ಕಾಂಗ್ರೆಸಿಗ ರನ್ನು ಪಕ್ಷದಿಂದ ಹೊರಹಾಕುವದಾಗಿ ಭೂಪಾಲ ವಾರ್ತೆ.

೦೦

ಕರ್ನಾಟಕ ಮಂತ್ರಿ ಶ್ರೀ ವಿ. ಕೆ. ಕೃಷ್ಣಮೆನರ್ ನಿನ್ನೆ ಬೊಂಬಾಯಿ ನೌಕಾ ದಳದ ಹಡಗು ನಿಲ್ಲುವ ಹಡಗು ನಿರ್ಮಾಣ ವಸ್ತು ಉದ್ಘಾಟಿಸಿದರು;

ವಿವಿಧ ವಿಷಯಗಳು

ಪ್ರಾಯಶಃ ಈ ಮಾಹೆ 23 ರಂದು ಇಂಜೀಯರಿಂಗ್‌ನ ರಿಕಾರ್ಡೋ ಮಾಂಗೀ ಸಂನ್ನು ಅಮೆರಿಕಾ ಬಾಹ್ಯಾಂತರಿಕ್ಷಕ್ಕೆ ಕಳಿಸಬಹುದು.

ಟಿಬೆಟ್ಟಿನಲ್ಲಿ ಚೀನೆಯರು ಇಟ್ಟಿರುವ 1896 ಶಾಲೆಗಳಲ್ಲಿ 30 ಸಹಸ್ರ ಮಕ್ಕಳಿಗೆ ಕವ್ಯಾನಿಸಂ ಬೋಧಿಸಲಾಗುತ್ತಿದೆ.

ಬೆಂಗಳೂರು ಸಿವಿಲ್ ಸ್ಪೇರ್ಷನ್ಸ್‌ನ ಅ|| ಹ|| ಮ್ಯಾಜಿಸ್ಟ್ರೇಟರಾದ ಶ್ರೀ ಎಂ ರಾಮಚಂದ್ರರಾವ್‌ರ ಮುಂದೆ ಸಾಧು ಸೇವನ್ಸರ ಮೊಕದ್ದಮೆ ಬಂದು ವಿಚಾರಣೆ ನಡೆಸುವ ಸಲುವಾಗಿ ಈ ಮಾಹೆ 22 ನೆಯ ತಾ|| ಗೆ ಮುಂದುವರಿ ಯಿತು. 17 ವರ್ಷದ ಕುಮಾರಿ ತಿಭುವನಂ ಎಂಬವಂನ್ನು ಅವರ ತಾಯಿಯು ರಕ್ಷಣೆಯಿಂದ ಅಪಹರಿಸಿದ ಆರೋಪ ಸಾಧುವಿನ ಮೇಲೆ ಇದೆ ಸಾಧುವನ್ನು ನೋಡಲು ಕೋರ್ಟು ಹಾಲ್‌ನಲ್ಲಿ ಜನ ಭರ್ತಿ ಇದ್ದರು.

ಪಶ್ಚಿಮ ಜರ್ಮನಿಯ ಫ್ರೈಬುರ್ಗ್ ವಿಶ್ವವಿದ್ಯಾನಿಲಯದ ಡಾ|| ಕೆಚ್ ಹೃ ಕೆರಿಯವರು ಕಟಕ್ಕಿನಲ್ಲಿ ನಿನ್ನೆ 49 ನೆಯ ವಿಜ್ಞಾನ ಕಾಂಗ್ರೆಸಿನಲ್ಲಿ ಮಾತನಾಡುತ್ತ ಹೊಗೆಸೊಪ್ಪು ಅಗಿಯುವದು ಕ್ಯಾನ್ಸರಿಗೆ ಕಾರಣ ಎಂದು ನುಡಿದರು.

ಭಾರತದ ಧಾರ್ಮಿಕ ಸ್ಥಳಗಳ ಭಾವ ಚಿತ್ರಗಳ ಪ್ರದರ್ಶನ ರಾಮೇಶ್ವರಂನಲ್ಲಿ ನಡೆಯಿತು.

ವೈಸೂರಿನ ಶ್ರೀ ಶಿವರಾತ್ರೀಶ್ವರ ವಿದ್ಯಾಪೀಠದಲ್ಲಿ ನಡೆಯುತ್ತಿರುವ ಜಗ ದ್ಗುರು ಶ್ರೀ ಶಿವರಾತ್ರೀಶ್ವರ ಜಯಂತಿ ಮಹೋತ್ಸವ ಸಪ್ತಾಹ ಕಾರ್ಯಕ್ರಮ ನಿನ್ನೆ ಸಂಜೆ ಗೃಹಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಕ್ಕೃಷ್ಣ ಜೋಯಿಸರಿಂದ
11 ಪಂಚಮಿ ಪೂರ್ವಾಭಾದ್ರ

ಹೆಂಡತಿಂದಿರ ಅದುಲುಬದುಲು

ಪಿಪಾಲಿಯಾ ಗ್ರಾಮದಲ್ಲಿ ನಡೆದ ವಿಚಿತ್ರ ಘಟನೆ. 50 ನಯೇ ಪೈಸೆ ಸ್ವಾಂವು ಹಚ್ಚಿದ ಕಂಠಾರು ಪತ್ರದಲ್ಲಿ ಈರ್ವರು ತಮ್ಮ ಹೆಂಡತಿಯರನ್ನು ಅದಲುಬದಲು ಮಾಡಿಕೊಂಡರು !

ಆಹಾರ ದಾಸ್ತಾನು ಕೋಠಿಗಳು

ನವದೆಹಲಿ 9— ಕೇಂದ್ರ ವೇರ್‌ಹೌಸಿಂಗು ಕಾರ್ಪೊರೇಷನ್ನ ಮುಂದಿನ ಹಣಕಾಸು ವರ್ಷದಲ್ಲಿ ಒಟ್ಟು 17 ಆಹಾರಧಾನ್ಯಗಳ ಸಂಗ್ರಹಕೋಠಿಗಳನ್ನು ತೆರೆಯಲಿದೆ ; ಇಂದು ಭಾರತಾದ್ಯಂತ ಈ ಸಂಸ್ಥೆಯು ಒಟ್ಟು 50 ಕೋಠಿಗಳನ್ನು ತೆರೆದಿದೆ.

ತೃತೀಯ ಯೋಜನೆಯಲ್ಲಿ ಒಟ್ಟೆ ಉತ್ಪಾದನೆ

ತೃತೀಯ ಯೋಜನೆಯಲ್ಲಿ 65-66ನೆ ವೇಳೆಗೆ ಹತ್ತಿಗಿಂಡಿ ಉದ್ಯಮದ ಎಲ್ಲಾ ಕ್ಷೇತ್ರಗಳೂ ಸೇರಿ 93000 ಲಕ್ಷ ಗಜಗಳಷ್ಟು ಬಟ್ಟೆಯನ್ನು ಉತ್ಪಾದಿಸಲಾಗುವುದೆಂದು ಲೆಕ್ಕಾಚಾರ ಹಾಕಲಾಗಿದೆ.

ಕಲ್ಲಿದ್ದಲು ಗಣಿಗಳಲ್ಲಿ

ನವದೆಹಲಿ 8— 1961 ರ ಅಕ್ಟೋಬರು ತಿಂಗಳಲ್ಲಿ ಒಟ್ಟು 850 ಕಲ್ಲಿದ್ದಲು ಗಣಿಗಳು ಕೆಲಸಮಾಡುತ್ತಿದ್ದವು ; ಈ ಗಣಿಗಳಲ್ಲಿ ಒಟ್ಟು 408417 ಜನ ಕಾರ್ಮಿಕರು ಕೆಲಸಮಾಡುತ್ತಿದ್ದರು ಎಂದು ಪ್ರಕಟವಾಗಿದೆ.

ನೂತನ ಯೋಜನೆ

ಮಾಸ್ಕೊ 8— ಅತಿ ಚಳಿಯಾದ ಮಾಸ್ಕೋ ನಗರದ ಭೂಗರ್ಭದಲ್ಲಿ ಬಿಸಿನೀರಿನ ಕೊಳವಿಗಳನ್ನು ಹಾಕಿ ಶಕ್ತೂಲಕ ನಗರವನ್ನು ಬೆಚ್ಚಗಿಡಲು ಯೋಜನೆ ಸಲಾಗಿದೆ.

ನನ್ನ ಹೃದಯದಲ್ಲಿ ನೆಲೆಸಿರುವ ಭಾರತ

ಭಾರತ ದೇಶಕ್ಕೆ ಒಮ್ಮೆ ಭೇಟಿ ಕೊಟ್ಟವರು ಎಂದಿಗೂ ಅದನ್ನು ಮರೆಯಲಾರರು ; ಭಾರತ ಸೋವಿಯತ್ ಸಾಂಸ್ಕೃತಿಕ ಆಹ್ವಾನದ ಮೇರೆಗೆ ಕೆಲವು ವರ್ಷಗಳ ಹಿಂದೆ ನಾನು ಭಾರತಕ್ಕೆ ಹೋಗಿದ್ದು, ಅದರ ಹಿಂದಿನ, ಇಂದಿನ ವೈಭವದ ಪರಿಚಯವನ್ನು ಪಡೆದೆನು ; ಭಾರತದಲ್ಲಿದ್ದಾಗ ಭಾರತೀಯ ಸಂಗೀತವನ್ನು ಕೇಳುವ ಅವಕಾಶ ನನಗೆ ಸಿಕ್ಕಿತ್ತು : ನನಗೆ ಅತ್ಯಂತ ಆಪ್ತವೆನಿಸಿದ ಭಾರತೀಯ ರಾಗಗಳ ಆಧಾರದ ಮೇಲೆ ಸಂಗೀತ ಬರೆಯುವ ಯೋಜನೆಯಿದೆ ; ಭಾರತದ ಶಾಂತಿಪ್ರಿಯ ಜನತೆಯೊಡನೆ ನನ್ನ ಸ್ನೇಹ ಸಂಬಂಧಗಳು ಬಲವರ್ಧನೆ ಪಡೆಯುತ್ತಿರುವುದನ್ನು ಕಾಣಲು ಸಂತೋಷವಾಗುತ್ತದೆ— ಎಂದು ಸೋವಿಯತ್‌ನ ಅರ್ಥೀನಿಯಾದ ಅರ್ನೋ ಬಬಧ್ಜನ್ಯಾನರು ಬರೆದಿದ್ದಾರೆ.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜನಪ್ರಿಯ 5 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಆಶಾ ಪರಾಖ್ ಮತ್ತಿಂ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯಂತ ಮನಸಂಜಿಸಿದ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ— ಜನಭರಿತ 2 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವರಲಕ್ಷ್ಮಿ, ಹರಿಣಿ, ನರಸಿಂಹರಾಜು

ಕಾಂತಾ ರಾವ್, ರಾಜ್ಯನಾಶ [ದಿನವಹಿ 3 ಆಟಗಳು]





ಅಮೇರಿಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು

For Quality Printing ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

L. N. Press ಅ ಶೋ ಕಾ ಫಾರ್ಮಸಿ

Sivarampet, Mysore ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

Edited, Printed & Published by the Proprietor, Dharma Prachara Nirata M. S. Krishna Rao. at the Sahyadri Press Chamarajapuram, Mysore 4.